ಮಕ್ಕಳೇ ಪ್ರಮುಖರು

ಜುಲೈ 2021

# ದೇವರೊಂದಿಗೆ ಸಮಯ

**2 ಪೂರ್ವಕಾಲವೃತ್ತಾಂತ 30:9ಬಿ**
**ನಿಮ್ಮ ದೇವರಾದ ಯೆಹೋವನು ದಯೆಯೂ ಕನಿಕರವೂ ಉಳ್ಳವನಾಗಿರುತ್ತಾನೆ. ಆತನು ತನ್ನ ಕಡೆಗೆ ತಿರುಗಿಕೊಳ್ಳುವ ನಿಮ್ಮನ್ನು ಕಟಾಕ್ಷಿಸದೆ ಇರುವದಿಲ್ಲ.**



ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಭಾನುವಾರ

- **1** ಲೂಕ 2:40,52 ಓದಿರಿ. ಯೇಸು ಕ್ರಿಸ್ತನಂತೆ ಬೆಳೆಯಲು ನಿಮಗೆ ಸಹಾಯ ಮಾಡಲು ದೇವರನ್ನು ಬೇಡಿಕೊಳ್ಳಿರಿ.
- **2** ನಿಮಗೆ ಬಹಳ ಇಷ್ಟವಾಗಿರುವಂಥದ್ದು ಯಾವುದು ನಿಮ್ಮ ಬಳಿಯಲ್ಲಿದೆ ಎಂದು ಯೋಚಿಸಿರಿ ಮತ್ತು ಅದಕ್ಕಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ.
- **3** ದೇವರು ಎಷ್ಟು ಅದ್ಭುತನು ಎಂದು ನೀವು ಆಲೋಚಿಸುವಂಥದ್ದರ ಚಿತ್ರವನ್ನು ಬಿಡಿಸಿರಿ.
- **4** ದೇವರಿಗೆ ಪ್ರಾರ್ಥನೆ ಮಾಡಿರಿ ಮತ್ತು ಆತನನ್ನು ನಿಮ್ಮ ಪೂರ್ಣ ಹೃದಯದಿಂದ, ಪ್ರಾಣದಿಂದ ಮತ್ತು ಮನಸ್ಸಿನಿಂದ ಪ್ರೀತಿಸಲು ನಿಮಗೆ ಸಹಾಯ ಮಾಡುವಂತೆ ಬೇಡಿಕೊಳ್ಳಿರಿ.
- **5** ನಿಮ್ಮ ಹೆಬ್ಬೆರಳನ್ನು ಮಡಚಿರಿ ಮತ್ತು ನಿಮ್ಮ ಹೆಸರನ್ನು ಬರೆಯಿರಿ. ನಿಮ್ಮ ಕೈಗಳಿಗಾಗಿ ದೇವರಿಗೆ ಸ್ತೋತ್ರ ಹೇಳಿರಿ.
- **6** ಇಂದು ರಾತ್ರಿ ನಕ್ಷತ್ರಗಳನ್ನು ಅಥವಾ ಆಕಾಶವನ್ನು ನೋಡಿ ದೇವರಿಗೆ ಪ್ರಾರ್ಥನೆ ಮಾಡಿರಿ.
- **7** ನಿಮ್ಮನ್ನು ಕ್ರಿಯಾತ್ಮಕ ಕಾರ್ಯಗಳಿಂದ ತುಂಬಿಸುವಂತೆ ದೇವರನ್ನು ಬೇಡಿಕೊಳ್ಳಿರಿ ಮತ್ತು ಪೇಪರ್ ಚಿತ್ರವನ್ನು ಮಾಡಿರಿ.
- **8** ಮತ್ತಾಯ 25:40 ಓದಿರಿ ಮತ್ತು ಯಾವುದೇ ನಿರೀಕ್ಷೆಯಿಲ್ಲದೆ, ಪೂರ್ಣ ಹೃದಯದಿಂದ ಏನಾದರು ಕೊಡಿರಿ.
- **9** 2 ಸಮುವೇಲ 9ನೇ ಅಧ್ಯಾಯದಲ್ಲಿರುವ ಕಥೆಯ ಚಿತ್ರವನ್ನು ಬಿಡಿಸಿರಿ.
- **10** ವಿಶೇಷವಾದ ಅವಶ್ಯಕತೆಗಳಿರುವ ಮತ್ತು ತಳ್ಳಲ್ಪಟ್ಟಿರುವ ಮಕ್ಕಳಿಗಾಗಿ ಪ್ರಾರ್ಥನೆ ಮಾಡಿರಿ.
- **11** ನಿಮ್ಮ ಕುಟುಂಬದ ಸದಸ್ಯರೊಂದಿಗೆ ಸೇರಿ ಗಾಳಿಪಟ ಮಾಡಲು ಪ್ರಯತ್ನಿಸಿರಿ, ಕೊಲೊಸ್ಸೆ 3:23 ಓದಿರಿ.
- **12** ಯೋಹಾನ 15:16 ಓದಿರಿ ಮತ್ತು ಯಾರಿಗಾದರೂ ಕರುಣೆಯನ್ನು ತೋರಿಸಿರಿ.
- **13** ಆಕಾಶವನ್ನು ನೋಡಿರಿ ಮತ್ತು ಮೋಡಗಳ ಆಕಾರವನ್ನು ಗಮನಿಸುವಾಗ, ಅವು ಹೇಗೆ ಕಾಣಿಸುತ್ತವೆ? ಕೀರ್ತನೆ 19:1 ಓದಿರಿ.
- **14** ಸತ್ಯವೇದದಲ್ಲಿರುವ ಯಾವ ವ್ಯಕ್ತಿಯನ್ನು ಭೇಟಿ ಮಾಡಲು ನೀವು ಬಯಸುವಿರಿ, ಆತನ ಬಳಿ ಏನು ಕೇಳಲು ಇಷ್ಟಪಡುವಿರಿ?
- **15** ಭೂಪಟದಲ್ಲಿ ಯಾವುದಾದರೊಂದು ಸಣ್ಣ ದೇಶವನ್ನು ಆಯ್ಕೆ ಮಾಡಿರಿ ಮತ್ತು ಅದರ ನಿವಾಸಿಗಳನ್ನು ದೇವರು ಆಶೀರ್ವಾದ ಮಾಡುವಂತೆ ಪ್ರಾರ್ಥನೆ ಮಾಡಿರಿ.
- **16** ನಮ್ಮ ಕಾಲುಗಳು ನಮ್ಮನ್ನು ಸರಿಯಾದ ಅಥವಾ ತಪ್ಪಾದ ಸ್ಥಳಗಳಿಗೆ ನಡೆಸಬಲ್ಲವು, ಧರ್ಮೋಪದೇಶಕಾಂಡ 5:33 ಬರೆಯಿರಿ ಮತ್ತು ಅದನ್ನು ನಿಮ್ಮ ಪಾದರಕ್ಷೆಗಳ ಪಕ್ಕದಲ್ಲಿ ಇಡಿರಿ.
- **17** ಲೋಕದಾದ್ಯಂತ ಮಕ್ಕಳ ಸೇವೆಗಳ ಮೂಲಕ ಸೇವೆ ಮಾಡುತ್ತಿರುವವರೆಲ್ಲರಿಗಾಗಿ ಪ್ರಾರ್ಥನೆ ಮಾಡಿರಿ.
- **18** ನಿಮ್ಮ ಕುಟುಂಬದವರೊಂದಿಗೆ ಸೇರಿ ಫಿಲೆಮೋನನ ಪತ್ರಿಕೆಯನ್ನು ಓದಿರಿ ಮತ್ತು ನಿಮಗೆ ಇಷ್ಟವಾದ 3 ಸಂಗತಿಗಳನ್ನು ಬರೆಯಿರಿ.
- **19** ದೇವರು ಪ್ರಾಣಿಗಳನ್ನು ಸಹ ಉದ್ದೇಶದಿಂದ ಉಂಟುಮಾಡಿರುವ ಕಾರಣ ಅವುಗಳಿಗಾಗಿ ಪ್ರಾರ್ಥನೆ ಮಾಡಿರಿ.
- **20** ದೊಡ್ಡದಾಗಿ ತೋರಿಸುವ ಗಾಜು ಮತ್ತು ಹೃದಯದ ಚಿತ್ರವನ್ನು ಬಿಡಿಸಿರಿ, ಕೀರ್ತನೆ 139:23-24 ಓದಿ ಯೇಸು ಕ್ರಿಸ್ತನೊಂದಿಗೆ ಮಾತನಾಡಿರಿ ಮತ್ತು ನಿಮ್ಮ ಆಲೋಚನೆಗಳು, ಭಾವನೆಗಳು ಹಾಗು ಬಯಕೆಗಳನ್ನು ಪರೀಕ್ಷಿಸಿರಿ.
- **21** ಕೀರ್ತನೆ 103:1-2 ಓದಿರಿ ಮತ್ತು ಒಂದು ಕ್ಷಣ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿರಿ.
- **22** ನಿಮ್ಮ ಮನೆಯೊಳಗೆ 5 ಸಲ ನಡೆದಾಡಿರಿ, ಯೆಹೋಶುವ 6 ಓದಿರಿ.
- **23** ಕಸ ತೆಗೆಯುವವರಿಗಾಗಿ ಏನಾದರೂ ತಿಂಡಿ ಸಿದ್ಧಮಾಡಿರಿ ಮತ್ತು ಅವರಿಗಾಗಿ ಒಂದು ಸತ್ಯವೇದದ ವಚನವನ್ನು ಬರೆಯಿರಿ.
- **24** ಆಲ್ ಚಿಲ್ಡ್ರನ್ ಕೌಂಟ್ ಸಿಬ್ಬಂದಿಯಾಗಿರುವ ಜೆನ್ನಿ ಸಾನ್ಚೆಜ್ ಗಾಗಿ ಪ್ರಾರ್ಥನೆ ಮಾಡಿರಿ.



- **25** ನಿಮ್ಮ ಮನೆಯಲ್ಲಿ ಇರುವವರ ಬಗ್ಗೆ ನಿಮಗಿಷ್ಟವಿರುವ ವಿಷಯಗಳನ್ನು ಹೇಳಲು ಮತ್ತು ಅವರಿಗಾಗಿ ಪ್ರಾರ್ಥನೆ ಮಾಡಲು ಸಮಯವನ್ನು ತೆಗೆದುಕೊಳ್ಳಿರಿ.
- **26** ಲೂಕ 19:9 ಓದಿರಿ ಮತ್ತು ಆತನು ನಿಮ್ಮ ಮನೆಗೆ ಬಂದ ಕಾರಣ ದೇವರಿಗೆ ಸ್ತೋತ್ರ ಹೇಳಿರಿ.
- **27** ಬದುಕಲು ಉಸಿರಾಟವು ಬಹಳ ಪ್ರಾಮುಖ್ಯ! ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದು ಬಹಳ ಪ್ರಾಮುಖ್ಯ. ಯೋಹಾನ 3:16 ಕಂಠಪಾಠ ಮಾಡಿರಿ.
- **28** 1 ಕೊರಿಂಥ 3:16 ಓದಿರಿ ಮತ್ತು ಇಂದು ಯಾರನ್ನಾದರೂ ಪ್ರೋತ್ಸಾಹಪಡಿಸಿರಿ.
- **29** ಹಸಿರು ಬಣ್ಣದ ಬಾವುಟವಿರುವ ದೇಶದಲ್ಲಿ ದೇವರು ಸಮಾಧಾನ ಮತ್ತು ಆರೋಗ್ಯವನ್ನು ದಯಪಾಲಿಸುವದಕ್ಕಾಗಿ ಪ್ರಾರ್ಥನೆ ಮಾಡಿರಿ.
- **30** ಇದು ಕೇಳಿಸಿಕೊಳ್ಳುವ ಸಮಯವಾಗಿದೆ, 1 ಸಮುವೇಲ 3ನೇ ಅಧ್ಯಾಯ ಓದುವಂತೆ ಯಾರಿಗಾದರು ಹೇಳಿರಿ ಮತ್ತು ಗಮನವಿಟ್ಟು ಕೇಳಿಸಿಕೊಳ್ಳಿರಿ.
- **31** ಒಂದುವೇಳೆ ನಿಮ್ಮನ್ನು ಚಿಂತೆಗೆ ನಡೆಸುತ್ತಿರುವ ಅಥವಾ ಹೆದರಿಸುತ್ತಿರುವ ಸಂಗತಿ ಏನಾದರು ಇದ್ದರೆ, ಕೀರ್ತನೆ 42:11 ಓದಿರಿ ಮತ್ತು ದೇವರು ನಿಮಗೆ ಸಮಾಧಾನ ಹಾಗೂ ಧೈರ್ಯವನ್ನು ಕೊಡುವಂತೆ ಬೇಡಿಕೊಳ್ಳಿರಿ.